# ಮಕ್ಕಳ ಅರಮನೆ

ಪ್ರತಿಭೆ ಅನಾವರಣಗೊಳಿಸಲು

## ವಿದ್ಯಾರ್ಥಿ ಅಭಿಪ್ರಾಯ

ಕಳೆದ 3 ವರ್ಷಗಳಿಂದ ಅರಿವಿನ ಅರಮನೆ ಗ್ರಂಥಾಲಯದ ಪುಸ್ತಕಗಳನ್ನು ಪ್ರಾಜೆಕ್ಟ್ ಮಾಡುವ ಸಂದರ್ಭದಲ್ಲಿ ಹಾಗೂ ಅಧ್ಯಯನಕ್ಕಾಗಿ ಸದುಪಯೋಗಪಡಿಸಿಕೊಳ್ಳುತ್ತಿದ್ದೇನೆ. ರಸಪ್ರಶ್ನೆ ಕಾರ್ಯಕ್ರಮದಲ್ಲಿ ಹಾಗೂ ಬುಕ್ ಆಫ್ ದ ಮಂಥ್ ಕಾರ್ಯಕ್ರಮಗಳೆಂದರೆ ನನಗೆ ತುಂಬಾ ಇಷ್ಟ. ಆಶ್ರಯ ಫೌಂಡೇಷನ್ ವತಿಯಿಂದ ಸರ್ಕಾರಿ ಶಾಲಾ ಮಕ್ಕಳಿಗೆ ಈ ಸಂಸ್ಥೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸಿದೆ

**ರಾಜೇಶ್‌ನಾಯ್ಕ.**
**8ನೇ ತರಗತಿ**
**ಸ.ಹಿ.ಪ್ರಾ.ಶಾಲೆ, ಕಣ್ಣೂರು**

ಮಕ್ಕಳಲ್ಲಿ ಅಧ್ಯಯನಶೀಲ ಗುಣ ಬೆಳೆಸಲು ಆಶ್ರಯ ಫೌಂಡೇಷನ್ ಅರಿವಿನ ಅರಮನೆ ಗ್ರಂಥಾಲಯವನ್ನು ಒದಗಿಸಿರುವುದು ನಮಗೆ ವರದಾನವಾಗಿದೆ. ಅಲ್ಲದೆ ವಿಜ್ಞಾನ ಪ್ರಾಯೋಗಿಕ ಚಟುವಟಿಕೆಗಳನ್ನು ವಿಜ್ಞಾನ ಸಂಘದ ಮೂಲಕ ಆರಂಭಿಸಿದರು.

ಮಕ್ಕಳಲ್ಲಿ ಪುಸ್ತಕ ಓದುವ ಅಭಿರುಚಿ ಮತ್ತು ಆಸಕ್ತಿಯನ್ನು ಉಂಟುಮಾಡಲು ಅನೇಕ ಪಠ್ಯಕ್ಕೆ ಪೂರಕವಾದ ಪುಸ್ತಕಗಳನ್ನು ನೀಡಿ ಜ್ಞಾನದ ಭಂಡಾರವನ್ನು ಹೆಚ್ಚಿಸುತ್ತಿದೆ. ಮಕ್ಕಳನ್ನು ಸೃಜನಶೀಲಗೊಳಿಸಲು ವಿನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಪಾಠದ ಕಲಿಕೆಯಲ್ಲಿ ಉಂಟಾಗುವ ಸಮಸ್ಯೆಗಳನ್ನು ಗ್ರಂಥಾಲಯದಲ್ಲಿ ದೊರಕುವ ಪುಸ್ತಕಗಳಿಂದ ಮಾಹಿತಿ ದೊರಕುತ್ತಿದೆ. ನನಗೆ ಕಥೆ ಹಾಗೂ ಕಾದಂಬರಿಗಳೆಂದರೆ ಅಚ್ಚುಮೆಚ್ಚು.

**ವನಿತ. 7ನೇ ತರಗತಿ**
**ಸ.ಹಿ.ಪ್ರಾ.ಶಾಲೆ, ಹನೂರು**

## ಮನೆ ಮದ್ದು

| | |
|---|---|
| ಸೌತೆಕಾಯಿ | – ಜೀರ್ಣಶಕ್ತಿ ಹೆಚ್ಚಳ ಮತ್ತು ಉತ್ತಮ ನಿದ್ರೆ |
| ಏಲಕ್ಕಿ | – ಅಜೀರ್ಣ ಸಮಸ್ಯೆ ಶಮನ |
| ಮೆಣಸು | – ಅಜೀರ್ಣ, ಮೊಡವೆ, ಜಂತುಹುಳು ನಿವಾರಣೆ |
| ಈರುಳ್ಳಿ | – ರಕ್ತಹೀನತೆ, ಗಾಯದ ನೋವು, ರಕ್ತಸ್ರಾವ |
| ಕಡಲೆಕಾಳು | – ತೂಕ ಹೆಚ್ಚಳ, ಬಿಕ್ಕಳಿಕೆಗೆ ಕಡಿವಾಣ |
| ಹಲಸಿನ ಹಣ್ಣು | – ತಲೆನೋವು, ನಿತ್ರಾಣ ಶಮನ |
| ಶುಂಠಿ | – ಗಂಟಲು ಕಟ್ಟುವಿಕೆ, ಬಾಯಿ ವಾಸನೆ |
| ಮೆಂತ್ಯಸೊಪ್ಪು | – ಸಕ್ಕರೆ ಕಾಯಿಲೆ ನಿಯಂತ್ರಣ |
| ಎಳ್ಳು | – ಸುಟ್ಟಗಾಯ, ಉರಿಮೂತ್ರ |
| ಸಾಸಿವೆ | – ಹಲ್ಲುನೋವು |
| ಗೋಧಿ | – ಹೊಟ್ಟೆ ಹುಣ್ಣು, ಕೀಲುನೋವು |
| ಜೇನುತುಪ್ಪ | – ಚರ್ಮರೋಗ ನಿವಾರಣೆ |
| ಪರಂಗಿ ಹಣ್ಣು | – ಹೃದಯ ದೌರ್ಬಲ್ಯ |
| ನಿಂಬೆ | – ಸೊಳ್ಳೆಗಳ ಕಾಟ, ಬಾಯಿಯ ದುರ್ವಾಸನೆ |
| ಉದ್ದು | – ಸ್ತ್ರೀಯರ ಬಿಳುಪು ರೋಗ |
| ವೀಳ್ಯದೆಲೆ | – ಕೆಮ್ಮು ನೋವು |
| ಅರಿಶಿನ | – ರಕ್ತಸ್ರಾವ, ಮೊಡವೆ |
| ತುಳಸಿ | – ಹುಳುಕಡ್ಡಿ |

**ದಿವ್ಯ 7ನೇ ತರಗತಿ, ಲೊಕ್ಕನಹಳ್ಳಿ**

"**Arivinaaramane** Library is the delivery room for the birth of ideas, a place where history comes to life"

"**Arivinaaramane** store the energy that fuels the imagination. They open up windows to the world and inspire us to explore and achieve and contribute to improving our quality of life"

## ಕವನಗಳು

ಮನಗೊಂದು ಮರ
ದೇವರು ಕೊಟ್ಟ ವರ
ಈಗೆಲ್ಲಿ ಮರ ಸುತ್ತೆಲ್ಲವೂ
ಕೇವಲ ಬರ ಬರ

ಕಲುಷಿತವಾಗಿದೆ ಪರಿಸರ
ಎಲ್ಲಿ ನೋಡಿದರಲ್ಲಿ
ಬಾನಿನ ಚಾದರ ಕೇಳುತ್ತಿಲ್ಲ
ಹಕ್ಕಿಗಳ ಕಲರವರ

ನಿಧಾನವಾಗಿ ಹರಿಯುತ್ತಿದೆ
ಓಜೋನ್ ಪದರ
ಮುಚ್ಚಲು ಸಾಧ್ಯವಿಲ್ಲ ಈ ಅಂತರ

ಎತ್ತೋಣ ನಾವೆಲ್ಲರೂ
ಹಸಿರು ಕ್ರಾಂತಿಯ ಸ್ವರ
ನೀವೂ ಜೋಡಿಸಿ
ನಮ್ಮೊಂದಿಗೆ ಕರ
ಒಬ್ಬಬ್ಬರೂ ಬೆಳೆಸಿದರೆ
ಒಂದೊಂದು ಮರ
ಸುತ್ತಲೂ ಬೀಸುವುದು
ಶಾಂತಿಯ ಚಾಮರ

**ಕವಿತಲಕ್ಷ್ಮಿ. 8ನೇತರಗತಿ,**
**ಸ.ಹಿ.ಪ್ರಾ.ಶಾಲೆ, ಮಂಗಲ**

**ವಿಘ್ನೇಶ್ ರಾಮಾಪುರ**






## ಆಶ್ರಯದ ಕಾರ್ಯನಿರತ ಸಿಬ್ಬಂದಿ

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಣ್ಣೂರು – ಮಂಜುಳ, ಗ್ರಂಥಪಾಲಕಿ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಂಗಲ – ಅಂಜಲಿ, ಗ್ರಂಥಪಾಲಕಿ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಲೊಕ್ಕನಹಳ್ಳಿ – ನಂದಿನಿ, ಗ್ರಂಥಪಾಲಕಿ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹನೂರು – ಪೂಜಿತ, ಗ್ರಂಥಪಾಲಕಿ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಣಗಳ್ಳಿ – ಲತಾ, ಗ್ರಂಥಪಾಲಕಿ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಂಡಳ್ಳಿ – ದೊಡ್ಡಮ್ಮ, ಗ್ರಂಥಪಾಲಕಿ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಸಪ್ಪನದೊಡ್ಡಿ – ಸವಿತ ಗ್ರಂಥಪಾಲಕಿ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ರಾಮಾಪುರ – ಜ್ಯೋತಿ ಗ್ರಂಥಪಾಲಕಿ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೆಂಪಯ್ಯನಹಟ್ಟಿ – ಪದ್ಮ ಗ್ರಂಥಪಾಲಕಿ
ವಿಜ್ಞಾನ ಶಿಕ್ಷಕಿ – ಸರಸ್ವತಿ, ಹಳೆ ಅಣಗಳ್ಳಿ.
ಚಿತ್ರಕಲಾ ಶಿಕ್ಷಕ – ಸಿದ್ದು. ಕೊಳ್ಳೇಗಾಲ
ಯೋಜನಾ ಸಂಯೋಜಕ – ಡಿ. ಹರೀಶ್. ಕೊಳ್ಳೇಗಾಲ.

ಯಾವುದೇ ಫಲಾಪೇಕ್ಷೆ ಇಲ್ಲದೆ ಸರ್ಕಾರಿ ಶಾಲೆಗಳ ಏಳಿಗೆಗಾಗಿ ದುಡಿಯುತ್ತಿರುವ ಚಾಮರಾಜನಗರ ಜಿಲ್ಲೆಯ ಹನೂರು ವಲಯ ಶೈಕ್ಷಣಿಕ ವಲಯದಲ್ಲಿ ಅರಮನೆಯ ಸೊಬಗನ್ನೇ ಹೊಂದಿರುವ ಗ್ರಂಥಾಲಯಗಳನ್ನು ನೀಡಿರುವ ಏಕೈಕ ಸರ್ಕಾರೇತರ ಸಂಸ್ಥೆ ಬೆಂಗಳೂರಿನ ಆಶ್ರಯ ಫೌಂಡೇಷನ್.

**ಡಿ.ಸಾವುಕರಾಜು.**
**ಬಿಜಿಟಿ ಶಿಕ್ಷಕ. ಕಣ್ಣೂರು.**

**ವಿಶೇಷ ಸೂಚನೆ:** ಅರಿವಿನ ಅರಮನೆ ಗ್ರಂಥಾಲಯಗಳನ್ನೊಳಗೊಂಡ ಶಾಲಾ ಶಿಕ್ಷಕರುಗಳು ಮತ್ತು ಮಕ್ಕಳು ವಿಜ್ಞಾನ ಸಂಘ, ಚಿತ್ರಕಲಾ ಸಂಘದ ಹಾಗೂ ಗ್ರಂಥಾಲಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ತಮ್ಮ ಲೇಖನಗಳನ್ನು ಅರಿವಿನ ಅರಮನೆ ಪತ್ರಿಕೆಗೆ ಸಲ್ಲಿಸಬಹುದು. ಈ ಕಾರ್ಯಕ್ರಮವನ್ನು ಇನ್ನೂ ಉತ್ತಮಪಡಿಸಿಕೊಳ್ಳಲು ಶಿಕ್ಷಕರುಗಳು ಅಭಿಪ್ರಾಯಗಳನ್ನು ಹಾಗೂ ಸಲಹೆಗಳನ್ನು ಬರಹ ರೂಪದಲ್ಲಿ ನೀಡಿದರೆ ಪ್ರಕಟಿಸಲಾಗುವುದು.

**ಆಶ್ರಯ ಫೌಂಡೇಷನ್, ಬೆಂಗಳೂರು**


Printed by RAJ NET & DTP, Kollegal-9986579754